REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 23 । 10 ಸೆಪ್ಟೆಂಬರ್ 2025 । ಬುಧವಾರ । ಪುಟಗಳು : 8 । ಬೆಲೆ : 2/-

## ರಾಜ್ಯದ ಸಹಕಾರ ಬ್ಯಾಂಕುಗಳು ದೇಶಕ್ಕೆ ಮಾದರಿ : ಸಚಿವ ಎಚ್.ಕೆ. ಪಾಟೀಲ





**ಮೂಡಲಗಿ :** 'ರಡ್ಡಿ ಸಹಕಾರ ಬ್ಯಾಂಕು ರಾಜಕೀಯೇತರವಾಗಿ ಮತ್ತು ಒಗ್ಗಟ್ಟಿನಿಂದ ಬೆಳೆಸಿದ್ದರಿಂದ 114 ವರ್ಷಗಳ ಇತಿಹಾಸದಲ್ಲಿ ಎಲ್ಲಿಯೂ ಕಪ್ಪು ಚುಕ್ಕೆ ಹೊಂದಿಲ್ಲ' ಎಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರೂ ಆಗಿರುವ ಎಚ್.ಕೆ. ಪಾಟೀಲ ಅವರು ಹೇಳಿದರು.

ದಿನಾಂಕ : 31–08–2025ರಂದು ಧಾರವಾಡ ರಡ್ಡಿ ಸಹಕಾರ ಬ್ಯಾಂಕ್ ಮೂಡಲಗಿ ಶಾಖೆಯ ನೂತನ ಕಟ್ಟಡ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮತ್ತು ಸಂಘಟಕರು ನೀಡಿದ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಅವರು ದೇಶದ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿ ನಿಂತಿರುವಂತ ಸಹಕಾರಿ ಬ್ಯಾಂಕು ಎನ್ನುವ ಹೆಗ್ಗಳಿಕೆ ರಡ್ಡಿ ಸಹಕಾರ ಬ್ಯಾಂಕ್ ಹೊಂದಿದೆ ಎಂದರು.

ರಿಸರ್ವ್ ಬ್ಯಾಂಕ್ ಸಹಕಾರಿ ಬ್ಯಾಂಕ್‌ಗಳಿಗೆ ಅನುತ್ಪಾದಕ ಸಾಲಗಳ (ಎನ್‌ಪಿಎ)ಗಳನ್ನು ಪ್ರತಿ ಮೂರು ತಿಂಗಳಿಗೆ ತಿಳಿಸಬೇಕು ಎನ್ನುವುದು ರೈತಾಪಿ ಗ್ರಾಹಕರನ್ನು ಹೊಂದಿರುವ ಬ್ಯಾಂಕುಗಳಿಗೆ ಕಷ್ಟದ ಕೆಲಸವಾಗಿದೆ. ರಡ್ಡಿ ಸಹಕಾರ ಬ್ಯಾಂಕ್ ಆರ್‌ಬಿಐ ನಿರ್ದೇಶನವನ್ನು ಪಾಲಿಸಿಕೊಂಡು ಬಂದಿದ್ದು, ಸದ್ಯ ರಡ್ಡಿ ಸಹಕಾರ ಬ್ಯಾಂಕ್ ಅನುತ್ಪಾದಕ ಸಾಲ ಶೂನ್ಯವಾಗಿದೆ.

ಕರ್ನಾಟಕದಲ್ಲಿ ರಡ್ಡಿ ಸಹಕಾರ ಬ್ಯಾಂಕಿನಂತೆ ಹಲವಾರು ಪಟ್ಟಣ ಸಹಕಾರ ಬ್ಯಾಂಕ್‌ಗಳು ಆರ್‌ಬಿಐ ನಿರ್ದೇಶನವನ್ನು ಪಾಲಿಸಿಕೊಂಡು ಗಟ್ಟಿಯಾಗಿ ನೆಲೆ ನಿಂತು ದೇಶಕ್ಕೆ ಮಾದರಿಯಾಗಿವೆ ಎಂದರು. ವೇಗದ ಆರ್ಥಿಕ ಪ್ರಗತಿಯೊಂದಿಗೆ ಹೆಜ್ಜೆ ಹಾಕುವ ಸಲುವಾಗಿ ರಡ್ಡಿ ಸಹಕಾರ ಬ್ಯಾಂಕಿನ ಕೇಂದ್ರ ಕಚೇರಿಯು ಈಗಿರುವ 700 ಕೋಟಿ ಠೇವುಗಳು ಬರುವ ಜನವರಿ ಹೊತ್ತಿಗೆ ಒಂದು ಸಾವಿರ ಕೋಟಿ ಮತ್ತು ಮೂಡಲಗಿ ಶಾಖೆಯು ಈಗಿರುವ 66 ಕೋಟಿಯಿಂದ ಒಂದು ನೂರು ಕೋಟಿ ದಾಟಬೇಕು. ಅದನ್ನು ಸಾಧಿಸುವಿರೆನ್ನುವ ವಿಶ್ವಾಸ ನನಗಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಮಾತನಾಡಿ ಜನಸಾಮಾನ್ಯರ ಆರ್ಥಿಕ ಪ್ರಗತಿಗೆ ಮತ್ತು ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಸಹಕಾರ ಕ್ಷೇತ್ರವು ಪ್ರಮುಖ ಪಾತ್ರವಹಿಸಿವೆ. ಸಹಕಾರ ಕ್ಷೇತ್ರ ಅಗಾಧ ಬೆಳವಣಿಗೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರವು ಸಹಕಾರ ಕ್ಷೇತ್ರಕ್ಕೆ ಸಚಿವಾಲಯ ಮಾಡಿದೆ ಎಂದರು.

ದಿವ್ಯ ಸಾನಿಧ್ಯ ವಹಿಸಿದ್ದ ಎರೆಹೊಸಳ್ಳಿಯ ಮಹಾಯೋಗಿ ವೇಮನ ಸಂಸ್ಥಾನಮಠದ ವೇಮನಾನಂದ ಸ್ವಾಮೀಜಿ ಮತ್ತು ನವಲಗುಂದ ಶಾಸಕ ಎನ್.ಎಚ್.ಕೋನರಡ್ಡಿ ಮಾತನಾಡಿದರು. ರಡ್ಡಿ ಸಹಕಾರ ಬ್ಯಾಂಕಿನ ಅಧ್ಯಕ್ಷ ಕೆ.ಎಲ್. ಪಾಟೀಲ ಪ್ರಾಸ್ತಾವಿಕ ಮಾತನಾಡಿ ಬ್ಯಾಂಕಿನ ಪ್ರಗತಿ ಕುರಿತು ತಿಳಿಸಿದರು. ಸಲಹಾ ಸಮಿತಿ ಅಧ್ಯಕ್ಷ ಎಸ್.ಆರ್. ಸೋನವಾಲಕರ ಮೂಡಲಗಿ ರಡ್ಡಿ ಬ್ಯಾಂಕ್ ಪ್ರಗತಿ ಕುರಿತು ಮಾತನಾಡಿದರು.

ಬಸವಪ್ರಭು ಸ್ವಾಮೀಜಿ, ಬ್ಯಾಂಕ್ ಉಪಾಧ್ಯಕ್ಷ ಎಸ್.ಎನ್. ನಾಡಗೌಡ ವೇದಿಕೆಯಲ್ಲಿದ್ದರು. ಸಲಹಾ ಸಮಿತಿ ಸದಸ್ಯರಾದ ಕೆ.ಬಿ.ಪಾಟೀಲ, ಬಿ.ಎಚ್.ರಡ್ಡಿ, ವೈ.ಪಿ. ಬಡಗಣ್ಣವರ, ಆರ್.ಆರ್.ಪ್ಯಾಟಿಗೌಡರ, ಸಂತೋಷ ಸೋನವಾಲಕರ, ವಿಜಯಕುಮಾರ ಸೋನವಾಲಕರ, ಎ.ವಿ. ಕುಲಗೋಡ, ಶಾಖಾ ವ್ಯವಸ್ಥಾಪಕ ಎಸ್.ವ್ಹಿ. ಅಳವಂಡಿ, ಪ್ರಧಾನ ಕಛೇರಿಯ ನಿರ್ದೇಶಕರು ಹಾಗೂ ವಿವಿಧ ಶಾಖೆಗಳ ಸಲಹಾ ಸಮಿತಿ ಸದಸ್ಯರು ಸಿಬ್ಬಂದಿಯವರು ಇದ್ದರು. ಪ್ರೊ.ಎ.ಪಿ.ರಡ್ಡಿ, ಸುರೇಶ ಲಂಕೆಪ್ಪನ್ನವರ ನಿರೂಪಿಸಿದರು. ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಎಂ.ಮುದರಡ್ಡಿ ವಂದಿಸಿದರು.

'ತೆರಿಗೆ ಕಡಿತದ ಪ್ರಯೋಜನ ಗ್ರಾಹಕರಿಗೆ ವರ್ಗವಾಗುವ ವಿಶ್ವಾಸ' : ಸಿಬಿಐಸಿ 2

ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ್ ಮಹಾಸಭೆ – ಸದಸ್ಯರಿಗೆ ಶೇ.15 ಡಿವಿಡೆಂಡ ಘೋಷಣೆ 5

ನಿಮ್ಮ ಪ್ರಶ್ನೆ – ನಮ್ಮ ಉತ್ತರ 7

ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



# ಎಂಟು ವರ್ಷಗಳ ನಂತರ ಜನರ ಬವಣೆ ಅರಿತ ಕೇಂದ್ರ ಸರ್ಕಾರ

2017ರ ಜುಲೈ 1 ರಂದು ಪರಿಚಯಿಸಿದ ಹೊಸ ಸರಕು ಮತ್ತು ಸೇವಾ ತೆರಿಗೆ ಅಂದರೆ ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದು ಇದೀಗ 8 ವರ್ಷಗಳೇ ಕಳೆದಿವೆ. ಇದನ್ನು ಜಾರಿಗೊಳಿಸಿದ ಸಂದರ್ಭದಲ್ಲಿ ಮುಂದಿನ ದಿನಗಳಲ್ಲಿ ದೇಶ ಆರ್ಥಿಕವಾಗಿ ಬಲಿಷ್ಟವಾಗಲಿದೆ ಜನರ ಜೀವನ ಮಟ್ಟ ಸುಧಾರಣೆಯಾಗಲಿದೆ ಇದರಿಂದ ದೇಶದ ಜಿಡಿಪಿ ಅಭೂತಪೂರ್ವ ಬೆಳವಣಿಗೆಯಾಗಲಿದೆ ಎಂದೇ ಬಣ್ಣಿಸಲಾಗಿತ್ತು.

ಮೊದಲನೆಯಾಗಿ ನೋಡುವುದಾದರೆ, 2014ರಲ್ಲಿ ಜಿಡಿಪಿ ಬೆಳವಣಿಗೆ ಶೇ.7.4ರಷ್ಟು ಪ್ರಗತಿ ಸಾಧಿಸಿತ್ತು. ಈಗ ದಶಕಗಳು ಕಳೆದ ನಂತರ 2025ರ ವೇಳೆಗೆ ಜಿಡಿಪಿ ಬೆಳವಣಿಗೆ ಶೇ.6.5ರಷ್ಟಿದೆ. ಐಎಂಎಫ್ ಪ್ರಕಾರ 2025ರ ಆರ್ಥಿಕ ವರ್ಷದಲ್ಲಿ ಜಿಡಿಪಿ ಬೆಳವಣಿಗೆಯನ್ನು ಶೇ.6.4 ಎಂದು ಅಂದಾಜಿಸಲಾಗಿದೆ. ಮುಂದಿನ ಹಣಕಾಸು ವರ್ಷದಲ್ಲಿ ಉತ್ತಮ ಆರ್ಥಿಕ ಬೆಳವಣಿಗೆ ಕಾಣಲಿದ್ದು, ಮೊದಲ ತ್ರೈಮಾಸಿಕದ ವೇಳೆಗೆ ಶೇ.7.8 ಬೆಳವಣಿಗೆಯಾಗಲಿದೆ ಎಂದು ಅಂದಾಜಿಸಿದೆ. ಆದರೆ, ಅಮೇರಿಕಾ ಸುಂಕ ಸಮರದಿಂದ ಇದಕ್ಕೆ ಹೊಡೆತ ಬೀಳುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಇದರರ್ಥ ಜಿಡಿಪಿ ಬೆಳವಣಿಗೆಯಾಗುವುದಿರಲಿ ಪ್ರಸ್ತುತ ದರ ಉಳಿಸಿಕೊಂಡರೆ ಅದೇ ಸಾಧನೆ ಎನ್ನುವಂತಾಗಿದೆ.

ಅದೇನೇ ಇರಲಿ, ಜಿಎಸ್‌ಟಿ-2 ತುಸು ಮಟ್ಟಿಗೆ ನ್ಯಾಯೋಚಿತವಾಗಿದೆ ಹಾಗೂ ಸ್ವಾಗತಾರ್ಹ ಎನ್ನಬಹುದಾಗಿದೆ. ಆದರೆ ತನ್ನ ತಪ್ಪುಗಳನ್ನು ಸರಿಪಡಿಸಲು ಕೇಂದ್ರ ಸರ್ಕಾರ ಎಂಟು ವರ್ಷಗಳನ್ನು ತೆಗೆದುಕೊಂಡಿರುವುದನ್ನು ವಿಳಂಬ ನ್ಯಾಯ ಎಂದೇ ಹೇಳಬೇಕಾಗುತ್ತದೆ.

ನಮ್ಮ ದೇಶದ ಆರ್ಥಿಕತೆಯಲ್ಲಿ ಸೇವಾ ವಲಯದ ಪಾಲು ಶೇ.57ರಷ್ಟಿರುವಾಗ ತೆರಿಗೆ ದರ ಹೆಚ್ಚಳದಿಂದ 130 ಕೋಟಿ ಜನಸಂಖ್ಯೆಯಿರುವ ದೇಶದಲ್ಲಿ ಸರ್ಕಾರದ ನಿರೀಕ್ಷೆಯಾದ ರೂ.150 ಲಕ್ಷ ಕೋಟಿಗೂ ಹೆಚ್ಚು ಆದಾಯ ಗಳಿಸಬೇಕಿದ್ದರೇ, ಜನಸಾಮಾನ್ಯರ ಮೇಲೆ ಹೆಚ್ಚು ಹೆಚ್ಚು ತೆರಿಗೆ ವಿಧಿಸಬೇಕಾಗುತ್ತದೆ ಎನ್ನುವುದು ಯಾವುದೇ ರೀತಿಯಲ್ಲೂ ಸಮರ್ಥನೀಯವಲ್ಲ.

ರಾಜ ವಿಧಿಸುವ ಯಾವುದೇ ತೆರಿಗೆ ಸರಳ ಮತ್ತು ನ್ಯಾಯೋಚಿತವಾಗಿರಬೇಕು. ದುಂಬಿ ಹೂವಿನಿಂದ ಅದಕ್ಕೆ ಘಾಸಿಯಾಗದಂತೆ ಮಕರಂದ ಹೀರಿ ಕೊಳ್ಳುವಂತಿರಬೇಕು ಎನ್ನುತ್ತಾನೆ ಚಾಣಕ್ಯ. ಕೇಂದ್ರದ ಈಗಿನ ನಿರ್ಧಾರದಿಂದ ಮಧ್ಯಮ ಮತ್ತು ಬಡ ವರ್ಗಗಳು ಕಳೆದ ಎಂಟು ವರ್ಷಗಳ ಸುಲಿಗೆಗಳಿಂದ ಪಾರಾಗಿ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಪ್ರಸ್ತುತ ಕೇಂದ್ರ ಸರ್ಕಾರ ಕೃಷಿ ವಲಯದ ಕನಿಷ್ಠ 36 ವಸ್ತುಗಳ ಮೇಲೆ ಜಿಎಸ್‌ಟಿ ವಿಧಿಸಿತ್ತು. ಜೊತೆಗೆ ಜನಸಾಮಾನ್ಯರ ಬಳಕೆಯ ಹಾಲು-ಮೊಸರು, ಹಿಟ್ಟು-ಧಾನ್ಯಗಳು, ಮತ್ತು ಮಕ್ಕಳ ಪೆನ್ಸಿಲ್‌ಗಳು, ಪುಸ್ತಕಗಳು, ಆಮ್ಲಜನಕ, ವಿಮೆ ಮತ್ತು ಆಸ್ಪತ್ರೆ ವೆಚ್ಚಗಳ ಮೇಲೂ ಜಿಎಸ್‌ಟಿ ತೆರಿಗೆ ಸಂಗ್ರಹಿಸಲಾಗಿದೆ. ಒಟ್ಟು ಜಿಎಸ್‌ಟಿಯ ಮೂರನೇ ಎರಡರಷ್ಟು ತೆರಿಗೆ ಅಂದರೆ ಶೇ. 64 ರಷ್ಟು ಬಡ ಮತ್ತು ಮಧ್ಯಮ ವರ್ಗದವರ ಸಂಗ್ರಹವಾದರೆ, ಕೇವಲ ಶೇ. 3 ರಷ್ಟು ಮಾತ್ರ ಕೋಟ್ಯಾಧಿಪತಿಗಳಿಂದ ಸಂಗ್ರಹವಾಗುತ್ತದೆ, ಆದರೆ ಈಗ ಕಾರ್ಪೊರೇಟ್ ತೆರಿಗೆ ದರವನ್ನು ಶೇ.30 ರಿಂದ ಶೇ. 22ಕ್ಕೆ ಇಳಿಸಲಾಗಿರುವುದು ಯಾಕೆ ಅನ್ನುವ ಪ್ರಶ್ನೆ ನನ್ನಂತವರನ್ನು ಕಾಡುತ್ತಿದೆ.

▸▸ ಎಚ್.ಕೆ. ಪಾಟೀಲ

## 'ತೆರಿಗೆ ಕಡಿತದ ಪ್ರಯೋಜನ ಗ್ರಾಹಕರಿಗೆ ವರ್ಗವಾಗುವ ವಿಶ್ವಾಸ' : ಸಿಬಿಐಸಿ

**ನವದೆಹಲಿ:** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇಳಿಕೆಯು ಜಾರಿಗೆ ಬಂದ ನಂತರದಲ್ಲಿ, ಉತ್ಪನ್ನಗಳ ಬೆಲೆಯನ್ನು ತಗ್ಗಿಸದೆ ಇರುವುದಕ್ಕೆ ಸಂಬಂಧಿಸಿದ ದೂರುಗಳನ್ನು ಉದ್ಯಮ ವಲಯದ ಗಮನಕ್ಕೆ ತರಲಾಗುತ್ತದೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಹಾಗೂ ಸುಂಕಗಳ ಮಂಡಳಿಯ (ಸಿಬಿಐಸಿ) ಮುಖ್ಯಸ್ಥ ಸಂಜಯ್ ಕುಮಾರ್ ಅಗರ್ವಾಲ್ ಹೇಳಿದ್ದಾರೆ.

ವಿವಿಧ ಉತ್ಪನ್ನಗಳು, ಸೇವೆಗಳ ಮೇಲಿನ ತೆರಿಗೆಯನ್ನು ತಗ್ಗಿಸುವ ತೀರ್ಮಾನವನ್ನು ಜಿಎಸ್‌ಟಿ ಮಂಡಳಿಯು ಕಳೆದ ವಾರ ತೆಗೆದುಕೊಂಡಿದೆ. ಪರಿಷ್ಕೃತ ತೆರಿಗೆ ದರವು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ.

ನಿತ್ಯದ ಬಳಕೆಯ ಬಹುತೇಕ ಉತ್ಪನ್ನಗಳ ಮೇಲೆ ಶೇಕಡ 5ರಷ್ಟು ತೆರಿಗೆ ಇರಲಿದೆ. ಇನ್ನುಳಿದ ಉತ್ಪನ್ನಗಳು, ಸೇವೆಗಳ ಮೇಲೆ ಶೇ 18ರಷ್ಟು ತೆರಿಗೆ ಇರಲಿದೆ. ವೈಯಕ್ತಿಕ ಆರೋಗ್ಯ ವಿಮೆ, ಜೀವ ವಿಮೆಯ ಮೇಲೆ ಶೂನ್ಯ ತೆರಿಗೆ ಇರಲಿದೆ. ತೆರಿಗೆ ತಗ್ಗಿಸುವ ತೀರ್ಮಾನವನ್ನು ಜಿಎಸ್‌ಟಿ ಮಂಡಳಿಯು ಈ ಹಿಂದೆ ತೆಗೆದುಕೊಂಡಾಗ, ಉದ್ಯಮಗಳು ತೆರಿಗೆ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಿವೆ. ಮಾರುಕಟ್ಟೆಯಲ್ಲಿನ ಸ್ಪರ್ಧಾತ್ಮಕ ಶಕ್ತಿಗಳು ತೆರಿಗೆ ಇಳಿಕೆಯ ಪ್ರಯೋಜನವು ಗ್ರಾಹಕರಿಗೆ ಸಿಗುವಂತೆ ಮಾಡುತ್ತವೆ ಎಂದು ಅಗರ್ವಾಲ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ತೆರಿಗೆ ಇಳಿಕೆಯ ಪ್ರಯೋಜನವನ್ನು ಉದ್ಯಮಗಳು ಗ್ರಾಹಕರಿಗೆ ವರ್ಗಾಯಿಸುತ್ತವೆ ಎಂಬ ವಿಶ್ವಾಸ ನಮ್ಮದು. ನಮಗೆ ಏನಾದರೂ ದೂರುಗಳು ಬಂದಲ್ಲಿ, ಅದನ್ನು ನಾವು ಉದ್ಯಮದ ಪ್ರಾತಿನಿಧಿಕ ಸಂಸ್ಥೆಗಳ ಜೊತೆ ಚರ್ಚಿಸುತ್ತೇವೆ' ಎಂದು ಅವರು ಹೇಳಿದ್ದಾರೆ.

ಜಿಎಸ್‌ಟಿ ಜಾರಿಗೆ ಬಂದ ಆರಂಭಿಕ ವರ್ಷಗಳ ಅನುಭವವನ್ನು ಹಂಚಿಕೊಂಡ ಅಗರ್ವಾಲ್ ಅವರು, 'ಲಾಭಕೋರತನದ ಬಗ್ಗೆ ದೂರು ಸಲ್ಲಿಸಲು ವ್ಯವಸ್ಥೆ ರೂಪಿಸಿದ್ದರೂ, 2017, 2018 ಮತ್ತು 2019ರಲ್ಲಿ ತೆರಿಗೆ ಇಳಿಕೆ ಮಾಡಿದ್ದಾಗ ಹೆಚ್ಚಿನ ದೂರುಗಳು ಬಂದಿರಲಿಲ್ಲ' ಎಂದಿದ್ದಾರೆ. 'ದರ ಇಳಿಕೆಯ ಪ್ರಯೋಜನವನ್ನು ಉದ್ದಿಮೆಗಳು ಗ್ರಾಹಕರಿಗೆ ಬಹುತೇಕ ವರ್ಗಾವಣೆ ಮಾಡಿದ್ದವು ಎಂಬ ಭಾವನೆಯನ್ನು ಇದು ನಮ್ಮಲ್ಲಿ ಮೂಡಿಸಿದೆ. ಹೀಗಾಗಿ ಈ ಬಾರಿಯೂ ಪರಿಸ್ಥಿತಿ ಭಿನ್ನವಾಗಿರುತ್ತದೆ ಎಂದು ನಾವು ನಿರೀಕ್ಷಿಸಿಲ್ಲ' ಎಂದು ಅಗರ್ವಾಲ್ ಹೇಳಿದ್ದಾರೆ. ಜಿಎಸ್‌ಟಿ ದರ ಇಳಿಕೆಯ ಪ್ರಯೋಜನವನ್ನು ವರ್ತಕರು ಹಾಗೂ ಉದ್ದಿಮೆಗಳು ಗ್ರಾಹಕರಿಗೆ ವರ್ಗಾವಣೆ ಮಾಡಬೇಕು ಎಂಬುದಾಗಿ ಜಿಎಸ್‌ಟಿ ಕಾನೂನು ಹೇಳುತ್ತದೆ.

# 56ನೇ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಶೇ.5 ಮತ್ತು ಶೇ.18ರ ಎರಡು ಹಂತದ ತೆರಿಗೆ ದರಕ್ಕೆ ಅನುಮೋದನೆ


**ನವದೆಹಲಿ:** ದೇಶದ ಅರ್ಥ ವ್ಯವಸ್ಥೆಯಲ್ಲಿ ಪ್ರಮುಖ ಸುಧಾರಣೆಯಲ್ಲಿ, ಜಿಎಸ್‌ಟಿ ಕೌನ್ಸಿಲ್ ಸೆಪ್ಟೆಂಬರ್ 22 ರಿಂದ ಜಾರಿಗೆ ಬರಲಿರುವ ಶೇಕಡಾ 5 ಮತ್ತು ಶೇಕಡಾ 18 ದರಗಳೊಂದಿಗೆ ಸರಳೀಕೃತ ಎರಡು ಹಂತದ ತೆರಿಗೆ ರಚನೆಗೆ ಅನುಮೋದನೆ ನೀಡಿದೆ.



10 ಗಂಟೆಗಳಿಗೂ ಹೆಚ್ಚು ಕಾಲ ನಡೆದ 56ನೇ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು. ನಾವು ದರಗಳನ್ನು ಕಡಿಮೆ ಮಾಡಿದ್ದೇವೆ. ಕೇವಲ ಎರಡು ಹಂತದ ದರ ಇನ್ನು ಮುಂದೆ ಇರುತ್ತವೆ. ಪರಿಹಾರ ಸೆಸ್ ಸಮಸ್ಯೆಗಳನ್ನು ಸಹ ಪರಿಹರಿಸುತ್ತಿದ್ದೇವೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 56ನೇ ಜಿಎಸ್‌ಟಿ ಕೌನ್ಸಿಲ್ ಸಭೆಯ ನಂತರ ಘೋಷಿಸಿದರು.

ತೆರಿಗೆಯಲ್ಲಿನ ಈ ಸುಧಾರಣೆ ಕ್ರಮಗಳನ್ನು ಸಾಮಾನ್ಯ ಜನರನ್ನು ಕೇಂದ್ರೀಕರಿಸಿ ಕೈಗೊಳ್ಳಲಾಗಿದೆ. ಸಾಮಾನ್ಯ ಜನರ ದೈನಂದಿನ ಬಳಕೆಯ ವಸ್ತುಗಳ ಮೇಲಿನ ಪ್ರತಿಯೊಂದು ತೆರಿಗೆಯನ್ನು ಕಠಿಣ ಪರಿಶೀಲನೆಗೆ ಒಳಪಡಿಸಲಾಗಿದೆ. ಹೆಚ್ಚಿನ ಸಂದರ್ಭಗಳಲ್ಲಿ ದರಗಳು ತೀವ್ರವಾಗಿ ಕಡಿಮೆಯಾಗಿದೆ.

ಕಾರ್ಮಿಕ–ತೀವ್ರ ಕೈಗಾರಿಕೆಗಳಿಗೆ ಉತ್ತಮ ಬೆಂಬಲ ನೀಡಲಾಗಿದೆ. ರೈತರು ಮತ್ತು ಕೃಷಿ ವಲಯ ಹಾಗೂ ಆರೋಗ್ಯ ವಲಯವು ಪ್ರಯೋಜನ ಪಡೆಯುತ್ತದೆ. ಆರ್ಥಿಕತೆಯ ಪ್ರಮುಖ ಚಾಲಕರಿಗೆ ಪ್ರಾಮುಖ್ಯತೆ ನೀಡಲಾಗುವುದು ಎಂದು ಅವರು ಹೇಳಿದರು.




## ದಿನಾಂಕ : 23.09.2025ರಂದು ಮಹಾಮಂಡಳದ 60ನೇ ವಾರ್ಷಿಕ ಮಹಾಸಭೆ

**ಬೆಂಗಳೂರು:** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ 2024–25ನೇ ಸಾಲಿನ 60ನೇ ವಾರ್ಷಿಕ ಮಹಾಸಭೆಯನ್ನು 23ನೇ ಸೆಪ್ಟೆಂಬರ್ 2025ರ ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಮಹಾಮಂಡಳದ ದಿ॥ ಕೆ.ಎಚ್. ಪಾಟೀಲ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸಭೆಗೆ ಮಹಾಮಂಡಳದ ಸದಸ್ಯ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಬೇಕಾಗಿ ವಿನಂತಿ. ಒಂದು ಸದಸ್ಯ ಬ್ಯಾಂಕಿನಿಂದ ಒಬ್ಬ ಪ್ರತಿನಿಧಿಗೆ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

# ವೈಶ್ಯ ಕೋ-ಆಪರೇಟಿವ್ ಬ್ಯಾಂಕಿನ 47ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ





ವೈಶ್ಯ ಕೋ-ಆಪರೇಟಿವ್ ಬ್ಯಾಂಕ್, ತುಮಕೂರು., ಇದರ 47ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್. ಗೋವಿಂದರಾಜು ಅವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಕೆ.ಎಸ್. ರಾಮಮೂರ್ತಿ, ನಿರ್ದೇಶಕರುಗಳಾದ ಶ್ರೀ ಎನ್.ಎ. ಅರುಣ್ ಕುಮಾರ್, ಶ್ರೀ ಕೆ.ಎಸ್. ನಾಗೇಶ್, ಶ್ರೀ ಸಿ.ಎಸ್. ಸಂಜಯ್, ಶ್ರೀ ಜಿ.ಎಸ್. ಅರುಣಾಚಲಂ ಮತ್ತು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್.ಸುಮ ಇವರುಗಳು ಉಪಸ್ಥಿತರಿದ್ದರು.

ವೈಶ್ಯ ಕೋ-ಆಪರೇಟಿವ್ ಬ್ಯಾಂಕ್, ತುಮಕೂರು, ಇದರ 47ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ ಪ್ರಯುಕ್ತ ಹಿರಿಯ ಸದಸ್ಯರಿಗೆ ಸನ್ಮಾನ ಮತ್ತು ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ತುಮಕೂರು ಜಿಲ್ಲೆ ಬೆಳ್ಳಾವಿ ಕಾರದೇಶ್ವರ ಮಠದ ಮಠಾಧಿಪತಿಗಳಾದ ಶ್ರೀ ಕಾರದ ವೀರಬಸವ ಮಹಾಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ ಜರುಗಿತು. ಈ ಸಂದರ್ಭದಲ್ಲಿ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು.

ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ॥ ಎಂ. ವೆಂಕಟೇಶ್ವರಲು, ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್.ಗೋವಿಂದರಾಜು ಉಪಾಧ್ಯಕ್ಷರಾದ ಕೆ.ಎಸ್. ರಾಮ ಮೂರ್ತಿ, ನಿರ್ದೇಶಕರುಗಳಾದ ಶ್ರೀ ಟಿ.ಎ. ಪಾರ್ಥಸಾರಥಿ, ಶ್ರೀ ಎಲ್.ಎ. ರಾಘವೇಂದ್ರ, ಶ್ರೀ ಕೆ. ವೆಂಕಟರಾಜು, ಡಾ॥ ಆರ್.ಎಲ್. ರಮೇಶ್‌ಬಾಬು, ಶ್ರೀ ಎನ್.ಎ. ಅರುಣ್ ಕುಮಾರ್, ಶ್ರೀ ಕೆ.ಎಸ್. ನಾಗೇಶ್, ಶ್ರೀ ಜಿ.ಎಸ್.ಅರುಣಾಚಲಂ, ಶ್ರೀಮತಿ ಆಶಾ ಶ್ರೀನಾಥ್, ಶ್ರೀಮತಿ ಸಿ.ಪಿ.ಮಾಲತಿ ಮತ್ತು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್.ಸುಮ ಇವರುಗಳು ಉಪಸ್ಥಿತರಿದ್ದರು.

## ಪಟ್ಟಣ ಸಹಕಾರ ಬ್ಯಾಂಕುಗಳ ಗಮನಕ್ಕೆ

ಮಹಾಮಂಡಳವು "ವಾರಪತ್ರಿಕೆ" ಹಾಗೂ "ತ್ರೈಮಾಸಿಕ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆ" ಎಂಬ ಎರಡು ಪತ್ರಿಕೆಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಹಕಾರ ಕ್ಷೇತ್ರ, ಬ್ಯಾಂಕಿಂಗ್ ಕ್ಷೇತ್ರ ಹಾಗೂ ಇತರೆ ಉಪಯುಕ್ತ ಸುದ್ದಿ / ವಿಚಾರಗಳನ್ನು ಹಾಗೂ ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬದಲಾವಣೆಗೊಳಪಡುವ ಸಹಕಾರಿ ಕಾನೂನು ವಿದ್ಯಮಾನಗಳ ಕುರಿತು ಪ್ರಶ್ನೋತ್ತರ, ವಿವಿಧ ಬ್ಯಾಂಕುಗಳ ಯಶೋಗಾಥೆ, ಪ್ರಗತಿ ಚಿತ್ರ, ಬ್ಯಾಂಕುಗಳಲ್ಲಿ ಜರುಗಿರುವ ವಿವಿಧ ಸಮಾರಂಭಗಳ ವಿವರಗಳನ್ನು ಪ್ರಕಟಿಸಲಾಗುತ್ತಿದೆ. ಈಗಾಗಲೇ ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ಷಿಕ ಮಹಾಸಭೆಗಳು ಜರುಗುತ್ತಿದ್ದು, ಮಹಾಸಭೆಯ ಛಾಯಾಚಿತ್ರ (ಫೋಟೋ) ವನ್ನು ಮತ್ತು ವರದಿಗಳನ್ನು ಹಾಗೂ ಬ್ಯಾಂಕಿಗೆ ಸಂಬಂಧಿಸಿದ ವರದಿಗಳನ್ನು ಕೂಡಲೇ ಮಹಾಮಂಡಳಕ್ಕೆ ಅಂಚೆ ಮೂಲಕ ಅಥವಾ ಇ-ಮೇಲ್ ವಿಳಾಸಕ್ಕೆ email: editorkubf1@gmail.com ಅಥವಾ kscubfed@gmail.comಗೆ ಕಳುಹಿಸಿಕೊಟ್ಟಲ್ಲಿ ಮಹಾಮಂಡಳದ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.


## ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು /ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ದಿನಾಂಕ : 27.09.2025ರಂದು ಗದಗ ಜಿಲ್ಲೆಯ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ಸಭಾಂಗಣದಲ್ಲಿ, ಹುಬ್ಬಳ್ಳಿ-ಗದಗ ರಸ್ತೆ, ಹುಲಕೋಟಿ – 582205 ಇಲ್ಲಿ ಏರ್ಪಡಿಸಲಾಗಿದೆ.

ಸದರಿ ವಿಚಾರ ಸಂಕಿರಣದಲ್ಲಿ ಕಾರ್ಪೋರೇಟ್ ಆಡಳಿತ ಪರಿಕಲ್ಪನೆಗಳು ಮತ್ತು ಸಿದ್ಧಾಂತಗಳು ಹಾಗೂ ನಿರ್ದೇಶಕ ಮಂಡಳಿಯ ಪಾತ್ರ, ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಗ್ರಾಹಕರ ಸೇವೆ / ವ್ಯವಹಾರ ಅಭಿವೃದ್ಧಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಲ್ಲಿ ಇತ್ತೀಚಿನ ತಿದ್ದುಪಡಿಗಳ ವಿವರ ವಿಷಯಗಳ ಕುರಿತು ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಸದರಿ ಕಾರ್ಯಕ್ರಮವನ್ನು ದಿನಾಂಕ : 27.09.2025ರಂದು ಬೆಳಗ್ಗೆ 08.30ಗಂಟೆಗೆ ಉಪಾಹಾರ ಹಾಗೂ ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು.

ಸದರಿ ವಿಚಾರ ಸಂಕಿರಣದಲ್ಲಿ ಭಾಗವಹಿಸುವವರು ಮಹಾಮಂಡಳದಲ್ಲಿ ದಿನಾಂಕ:20.09.2025ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಈ ವಿಚಾರ ಸಂಕಿರಣದಲ್ಲಿ ತಾವುಗಳು ಭಾಗವಹಿಸಿ, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

# ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ್ ಮಹಾಸಭೆ – ಸದಸ್ಯರಿಗೆ ಶೇ.15 ಡಿವಿಡೆಂಡ ಘೋಷಣೆ



**ಗಂಗಾವತಿ:** ದಿ.31.8.2025 ರಂದು ನಗರದ ಸಿ.ಬಿ.ಎಸ್.ಬ್ಯಾಂಕ್ ಎಂದೇ ಖ್ಯಾತಿ ಪಡೆದ ಪ್ರತಿಷ್ಠಿತ ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕಿನ ಸನ್ 2024–25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಬ್ಯಾಂಕಿನ ವಾರ್ಷಿಕ ವರದಿಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಗಿರಿಯಪ್ಪ ಹೊಸಕೇರಿ ಮಂಡಿಸಿದರು. ಬ್ಯಾಂಕು ಪ್ರಸಕ್ತ ಸಾಲಿಗೆ ರೂ. 1.46 ಕೋಟಿ ನಿವ್ವಳ ಲಾಭವನ್ನು ಗಳಿಸಿದೆ ಮತ್ತು ಸದಸ್ಯರಿಗೆ ಶೇ.15 ರಷ್ಟು ಡಿವಿಡೆಂಡ್ ನೀಡಿದೆ ಎಂದು ಅತೀವ ಹರ್ಷಚಿತ್ತರಾಗಿ ಮಹಾಸಭೆಗೆ ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ರೂ. 2.12 ಕೋಟಿಗಳ ಒಟ್ಟು ಲಾಭವನ್ನು ಗಳಿಸಿದೆ. ಇದರಲ್ಲಿ ಆದಾಯ ತೆರಿಗೆ ಮತ್ತು ಎನ್.ಪಿ.ಎ. ಪ್ರಾವಿಜನ್ ನಂತರ ನಿವ್ವಳ ರೂ. 1.46 ಕೋಟಿ ಲಾಭವನ್ನು ದಾಖಲಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಗಿರಿಯಪ್ಪ ಹೊಸಕೇರಿ ಇವರು ಮಹಾಸಭೆಗೆ ವಿವರಿಸಿದರು. ಈಗಾಗಲೇ ಕಾರಟಗಿ ಮತ್ತು ಕಂಪ್ಲಿ ಪಟ್ಟಣದಲ್ಲಿ ಬ್ಯಾಂಕಿನ ಎರಡು ಶಾಖೆಗಳನ್ನು ಪ್ರಾರಂಭಿಸಿದ್ದು ಇನ್ನೊಂದು ಶಾಖೆಯನ್ನು ಈ ವರ್ಷಾಂತ್ಯಕ್ಕೆ ಪ್ರಾರಂಭಿಸುವುದಾಗಿ ಆಡಳಿತ ಮಂಡಳಿಯು ಹಾಕಿಕೊಂಡ ಯೋಜನೆಯನ್ನು ಮಹಾಸಭೆಗೆ ತಿಳಿಸಿದ ಅವರು, ಬ್ಯಾಂಕಿನ ಈ ಸಾಧನೆಗೆ ಕಾರಣೀಕರ್ತರಾದ ನಮ್ಮ ಬ್ಯಾಂಕಿನ ಸದಸ್ಯ ಬಾಂಧವರು, ಎಲ್ಲಾ ಗ್ರಾಹಕರು ಹಾಗೂ ಠೇವಣಿದಾರರಿಗೆ ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ಪರವಾಗಿ ಧನ್ಯವಾದಗಳನ್ನು ಹೇಳಿದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಗಿರಿಯಪ್ಪ ಹೊಸಕೇರಿ ಇವರು ತಮ್ಮ ಸಂತಸವನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ದಿ. ಶ್ರೀ ಮಂಜುನಾಥ ಸಿದ್ದಾಪುರ ಇವರ ಅನನ್ಯ ಸೇವೆಯನ್ನು ಸ್ಮರಿಸಿ, ಆಡಳಿತ ಮಂಡಳಿ ಮತ್ತು ಸಿಬ್ಬಂದಿಯವರು ಶ್ರದ್ಧಾಂಜಲಿಯನ್ನು ಸಲ್ಲಿಸಿದರು.

ಬ್ಯಾಂಕಿನ ಸಿ.ಇ.ಓ. ನಾಗೇಶ್ ಗೌಳಿ ಬ್ಯಾಂಕಿನ ಪ್ರಗತಿಯ ಅಂಕಿ ಅಂಶಗಳನ್ನು ವಿವರಿಸುತ್ತಾ ಪ್ರಸಕ್ತ ಸಾಲಿನ ಅಂತ್ಯಕ್ಕೆ ಬ್ಯಾಂಕು ಉತ್ತಮ ಪ್ರಗತಿಯನ್ನು ಸಾಧಿಸಿದೆ. ದಿ.31.3.2025ರ ಅಂತ್ಯಕ್ಕೆ ರೂ.85.02 ಕೋಟಿ ಠೇವಣಿಗಳು, ರೂ.47.26 ಕೋಟಿ ಸಾಲ ಮತ್ತು ಮುಂಗಡಗಳು, ರೂ.42.59 ಕೋಟಿ ಹೂಡಿಕೆ ಮತ್ತು ರೂ.101.70 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿದೆ ಮತ್ತು 0% ನಿವ್ವಳ ಎನ್.ಪಿ.ಎ. ಪ್ರಮಾಣವನ್ನು ದಾಖಲಿಸಿ, ಪ್ರಸಕ್ತ ಸಾಲಿಗೆ ಬ್ಯಾಂಕು ಹಾಕಿಕೊಂಡ ಗುರಿಯನ್ನು ತಲುಪಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಭೆಯಲ್ಲಿ ಬ್ಯಾಂಕಿನ ನಿರ್ದೇಶಕರೂ ಹಾಗೂ ಮಾಜಿ ಶಾಸಕರಾದ ಶ್ರೀ ಪರಣ್ಣ ಮುನವಳ್ಳಿ, ನಿರ್ದೇಶಕರೂ ಹಾಗೂ ಮಾಜಿ ಸಂಸದರಾದ ಶ್ರೀ ಎಸ್.ಶಿವರಾಮಗೌಡ, ಹಿರಿಯ ನಿರ್ದೇಶಕರಾದ ಶ್ರೀ ಕೆ.ಚನ್ನಬಸಯ್ಯಸ್ವಾಮಿ, ಶ್ರೀ ಕೆ.ಕಾಳಪ್ಪ, ಶ್ರೀ ತಿಮ್ಮಣ್ಣ ಮೇದಾರ್ ಮತ್ತು ಯುವ ನಿರ್ದೇಶಕರಾದ ಶ್ರೀ ರಮೇಶ ಗೌಳಿ, ಶ್ರೀ ರಾಚಪ್ಪ ಸಿದ್ದಾಪುರ, ಶ್ರೀ ವಿನಯಕುಮಾರ್ ಕೆ. ಸಿ.ಎ. ಮತ್ತು ಮಹಿಳಾ ನಿರ್ದೇಶಕರಾದ ಶ್ರೀಮತಿ ಮುತ್ತಕ್ಕ ಅರಳಿ ಮತ್ತು ಶ್ರೀಮತಿ ಲತ ಮಾಲಿಪಾಟೀಲ ಮತ್ತು ಲೆಕ್ಕಾಧಿಕಾರಿ ವೀರಭದ್ರಪ್ಪ ಸಿದ್ದಾಪುರ, ಶೋಭಾ, ಸುಮಾ ಇತರರು ಸಭೆಯಲ್ಲಿ ಹಾಜರಿದ್ದರು.

ಇದೇ ಸಂದರ್ಭದಲ್ಲಿ ಬ್ಯಾಂಕಿನ ಪ್ರಗತಿಯಲ್ಲಿ ಸೇವೆ ನೀಡಿದ ಮಾಜಿ ನಿರ್ದೇಶಕರಾದ ಶ್ರೀ ನಾಗಪ್ಪ ಗಲಗಲಿ ಮತ್ತು ಮಾಜಿ ಉಪಾಧ್ಯಕ್ಷರಾದ ಶ್ರೀ ಶಿರಿಗೇರಿ ದೊಡ್ಡಪಂಪಣ್ಣ ಇವರಿಗೆ ಆಡಳಿತ ಮಂಡಳಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ಜಿಲ್ಲಾ ಮಟ್ಟದಲ್ಲಿ ಉತ್ತಮ ಸೇವೆಗಾಗಿ ಇಲಾಖೆಯಿಂದ ಪ್ರಶಸ್ತಿ ಪಡೆದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕರಿಗೂ ಸಹ ಆಡಳಿತ ಮಂಡಳಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

# ಬೆಳಗಾವಿ ಶ್ರೀ ಬಸವೇಶ್ವರ ಕೋ-ಆಪರೇಟಿವ್ ಬ್ಯಾಂಕಿನ 62ನೇ ವಾರ್ಷಿಕ ಮಹಾಸಭೆ



**ಬೆಳಗಾವಿ:** ದಿನಾಂಕ : 31.08.2025 ರಂದು ನಗರದ ಶ್ರೀ ಬಸವೇಶ್ವರ ಕೋ-ಆಪರೇಟಿವ್ ಬ್ಯಾಂಕಿನ 62ನೇ ವಾರ್ಷಿಕ ಮಹಾಸಭೆಯು ಬೆಳಗಾವಿಯ ರಾಮನಗರದಲ್ಲಿರುವ ವಿದ್ಯಾಧಿರಾಜ ಸಭಾಗೃಹದಲ್ಲಿ ಯಶಸ್ವಿಯಾಗಿ ಜರುಗಿತು.

ಜಗಜ್ಯೋತಿ ಶ್ರೀ ಬಸವಣ್ಣನವರ ಭಾವಚಿತ್ರದ ಪೂಜೆಯಿಂದ ಮೊದಲ್ಗೊಂಡು ಸಭೆಯು ಆರಂಭವಾಯಿತು. ಮೊದಲಿಗೆ ಬ್ಯಾಂಕಿನ ಜನರಲ್ ಮ್ಯಾನೇಜರರಾದ ಶ್ರೀ ಎಸ್.ಎಸ್. ವಾಲಿ ಇವರು ಎಲ್ಲ ಉಪಸ್ಥಿತ ಸದಸ್ಯರನ್ನು, ನಿರ್ದೇಶಕ ಮಂಡಲಿ ಸದಸ್ಯರನ್ನು ಹಾಗೂ ವ್ಯವಸ್ಥಾಪನಾ ಮಂಡಲಿ ಸದಸ್ಯರನ್ನು ಹಾರ್ಧಿಕವಾಗಿ ಸ್ವಾಗತಿಸಿದರು.

ಬ್ಯಾಂಕಿನ ನಿರ್ದೇಶಕರಾಗಿದ್ದ ಲಿಂ.ಶ್ರೀ ಬಸವರಾಜ ವಿರುಪಾಕ್ಷಪ್ಪಾ ರ್‍ಯೊಂಡ ಇವರು ಹಾಗೂ ವರದಿ ವರ್ಷದಲ್ಲಿ ನಿಧನರಾದ ಬ್ಯಾಂಕಿನ ಸದಸ್ಯರ ಆತ್ಮಕ್ಕೆ ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸಿ ಎರಡು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಪ್ರಾರ್ಥನೆಯೊಂದಿಗೆ ಸಮಾರಂಭಕ್ಕೆ ಚಾಲನೆ ನೀಡಲಾಯಿತು. ಮೊದಲಿಗೆ 75 ವರ್ಷ ವಯೋಮಾನದ, ಕಳೆದ 20 ವರ್ಷಗಳಿಂದ ಬ್ಯಾಂಕಿನ ಸದಸ್ಯರಾಗಿರುವ ಒಟ್ಟು 38 ಜನ ಹಿರಿಯ ಸದಸ್ಯರನ್ನು ಬ್ಯಾಂಕಿನ ಪರವಾಗಿ ಶಾಲು, ಫಲಪುಷ್ಪ ಹಾಗೂ ಸನ್ಮಾನ ಪತ್ರ ನೀಡಿ ಗೌರವಿಸಲಾಯಿತು.

2024-25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ/ಪಿ.ಯು.ಸಿ-2/ಡಿಪ್ಲೋಮಾ ಮತ್ತು ವಿವಿಧ ಪದವಿ ಪರೀಕ್ಷೆಗಳಲ್ಲಿ 90% ಕ್ಕಿಂತ ಹೆಚ್ಚು ಅಂಕಗಳಿಸಿದ ಒಟ್ಟು 28 ಜನ ಸದಸ್ಯರ ಮಕ್ಕಳಿಗೆ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಗೂ ವ್ಯವಸ್ಥಾಪನಾ ಮಂಡಲಿ ಸದಸ್ಯರು ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿ ಪ್ರೋತ್ಸಾಹಿಸಿದರು. ಅದರಂತೆ, 2024-25ನೇ ಸಾಲಿನಲ್ಲಿ ಹೆಚ್ಚಿನ ಸಾಲ ಹಂಚಿಕೆ ನೀಡಿದ ಶಾಖೆಯೆಂದು ರಾಮ ತೀರ್ಥನಗರ ಶಾಖೆಗೆ, ಅತ್ಯುತ್ತಮ ಸಾಲ ವಸೂಲಾತಿ ಸಾಧಿಸಿದ ಶಾಖೆಯೆಂದು, ಹುಬ್ಬಳ್ಳಿ ಶಾಖೆಗೆ, ಹೆಚ್ಚಿನ ಠೇವಣಿ ಸಂಗ್ರಹಿಸಿದ ಶಾಖೆಯೆಂದು ಕ್ಲಬ್ ರೋಡ ಶಾಖೆಗೆ, ಹಾಗೂ ಉತ್ತಮ ಲಾಭ ಗಳಿಸಿದ ಶಾಖೆಯೆಂದು ಮುಖ್ಯ ಶಾಖೆಗೆ ಆಡಳಿತ ಮಂಡಳಿ ಸದಸ್ಯರಿಂದ ಆಗಿನ ಶಾಖಾ ವ್ಯವಸ್ಥಾಪಕರುಗಳಿಗೆ ಪ್ರಶಸ್ತಿ ಮತ್ತು ನಗದು ಬಹುಮಾನ ನೀಡಿ ಪ್ರೋತ್ಸಾಹಿಸಿದರು.

ಆನಂತರ ವಿಷಯಗಳ ಪಟ್ಟಿಯ ಪ್ರಕಾರ ಸಭೆಯನ್ನು ಮುಂದುವರೆಸಿ, ಬ್ಯಾಂಕಿನ ಕಳೆದ ವಾರ್ಷಿಕ ಮಹಾಸಭೆಯ ನಡುವಳಿಕೆಗಳನ್ನು ಓದಿ ಧೃಡೀಕರಿಸಲಾಯಿತು. 2024-25ನೇ ಸಾಲಿನ ವಾರ್ಷಿಕ ವರದಿಯನ್ನು ಅಧ್ಯಕ್ಷರಾದ ಶ್ರೀ ರಮೇಶ ಎಮ್. ಕಳಸಣ್ಣವರ ಇವರು ವರದಿ ವಾಚನ ಮಾಡಿದರು. ಸದರಿ ಸಾಲಿಗಾಗಿ ಬ್ಯಾಂಕು ರೂ. 160.54 ಲಕ್ಷ ಲಾಭಗಳಿಸಿದ್ದು, ರೂ. 43.09 ಲಕ್ಷ ಆಯಕರ ಅನುವು ಮಾಡಿದ ನಂತರ ರೂ.117.45 ಲಕ್ಷ ನಿವ್ವಳ ಲಾಭವಾಗಿರುತ್ತದೆ. ಸದಸ್ಯರಿಗೆ ಶೇ.12 ರಷ್ಟು ಲಾಭಾಂಶವನ್ನು ಘೋಷಿಸಲಾಯಿತು. ನಿರ್ದೇಶಕರಾದ ಶ್ರೀಮತಿ ಸರಳಾ ಎಸ್. ಹೇರೆಕರ ಇವರಿಂದ ವಂದನಾರ್ಪಣೆ ಸಲ್ಲಿಸಲಾಯಿತು.

ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಮೇಶ ಎಮ್.ಕಳಸಣ್ಣವರ ಇವರು ವಹಿಸಿದ್ದರು. ಉಪಾಧ್ಯಕ್ಷರಾದ ಶ್ರೀ ಸತೀಶ ಕೆ ಪಾಟೀಲ, ನಿರ್ದೇಶಕರುಗಳಾದ ಶ್ರೀ ಬಾಳಪ್ಪಾ ಬಿ. ಕಗ್ಗಣಗಿ, ಶ್ರೀ ವಿಜಯಕುಮಾರ ಸಿ.ಅಂಗಡಿ (ಅಧ್ಯಕ್ಷರು-BoM), ಶ್ರೀ ಪ್ರಕಾಶ ಎಂ.ಬಾಳೇಕುಂದ್ರಿ, ಶ್ರೀ ರಮೇಶ ಎಸ್. ಸಿದ್ದಣ್ಣವರ, ಶ್ರೀ ಬಸವರಾಜ ವಿ.ಉಪ್ಪಿನ, ಶ್ರೀಮತಿ.ಸರಳಾ ಎಸ್. ಹೇರೆಕರ, ಶ್ರೀ ಗಿರೀಶ ಎಸ್. ಕತ್ತಿಶೆಟ್ಟಿ, ಶ್ರೀ ಗಿರೀಶ ವಿ. ಬಾಗಿ, ಶ್ರೀ ಸಚಿನ್ ಆರ್. ಶಿವಣ್ಣವರ, ಶ್ರೀ ಬಾಲಚಂದ್ರ ವಿ ಬಾಗಿ, ಶ್ರೀ ಜಗದೀಶ ಎಸ್ ಖಡಬಡಿ, ಶ್ರೀಮತಿ ಪೂಜಾ ಎ ಹುಕ್ಕೇರಿ, ಶ್ರೀ ಚಂದ್ರಕಾಂತ ಎಚ್. ಕಟ್ಟಿಮನಿ, ಶ್ರೀ ರಾಜೀವ ಬಿ ಕಾಳೇನಟ್ಟಿ, ತಜ್ಞ ನಿರ್ದೇಶಕರಾದ ಶ್ರೀ ಮಹಾದೇವ ಎಂ ಅಥಣಿ ಮತ್ತು ಶ್ರೀ ಚಂದ್ರಶೇಖರ ಎ. ಹಿರೇಮಠ, ವ್ಯವಸ್ಥಾಪನಾ ಮಂಡಲಿ ಸದಸ್ಯರುಗಳಾದ ಶ್ರೀ ರಾಜಶೇಖರ ಎಸ್. ಚೊಣ್ಣದ, ಶ್ರೀ ಸೋಮಶೇಖರ ಬಿ. ಹೊಂಬಳ, ಶ್ರೀ ಮಹೇಶ ಎಂ. ಉಡದಾರ ಹಾಗೂ ರಾಮದುರ್ಗ, ಮುಧೋಳ ಮತ್ತು ಹುಬ್ಬಳ್ಳಿ ಶಾಖಾ ಸಲಹಾ ಸಮಿತಿಯ ಸದಸ್ಯರು, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಸ್.ಎಸ್.ವಾಲಿ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಆರ್.ಯು. ತೆಲಸಂಗ, ಮುಖ್ಯ ಶಾಖಾ ವ್ಯವಸ್ಥಾಪಕರಾದ ಶ್ರೀ ವಿ.ವಿ. ಅಂಟಿನ, ಹಾಗೂ ಎಲ್ಲ ಶಾಖಾ ವ್ಯವಸ್ಥಾಪಕರು, ಸಿಬ್ಬಂದಿ ವರ್ಗ ಮತ್ತು ಪಿಗ್ಮಿ ಏಜಂಟರು ಉಪಸ್ಥಿತರಿದ್ದರು.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






**ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನಲ್ಲಿ ಹಿರಿಯ ನಾಗರಿಕರ ಹೆಸರಿನಲ್ಲಿ ಒಂದು ಠೇವಣಿ ಇದ್ದು, ಹಿರಿಯ ನಾಗರಿಕರಲ್ಲದ ತನ್ನ ಸಂಬಂಧಿಯನ್ನು ಠೇವಣಿಗೆ ನಾಮಿನಿ ಮಾಡಲಾಗಿದೆ. ಠೇವಣಿಗೆ ಹಿರಿಯ ನಾಗರಿಕರಿಗೆ ನೀಡುವ ಶೇ.0.50ರಷ್ಟು ಹೆಚ್ಚಿಗೆ ಬಡ್ಡಿ ನೀಡುತ್ತಿದ್ದೇವೆ. ಆತ ಫಾರ್ಮ್ ಎಚ್ ನೀಡಿದ್ದುದರಿಂದ ಬಡ್ಡಿ ಮೇಲೆ ತೆರಿಗೆ ಕಡಿತ ಮಾಡುತ್ತಿಲ್ಲ. ಠೇವಣಿಯ ಅವಧಿ 2027ರವರೆಗೆ ಇದೆ. ಇತ್ತೀಚೆಗೆ ಠೇವಣಿದಾರ ಮೃತಪಟ್ಟಿದ್ದು, ನಾಮಿನಿ ಠೇವಣಿಯನ್ನು ಮುರಿಯದೇ, ಅವಧಿಯವರೆಗೆ ಮುಂದುವರೆಸಲು ಕೇಳಿದ್ದಾನೆ. ಠೇವಣಿಗೆ ಹಿರಿಯ ನಾಗರಿಕರಿಗೆ ನೀಡುವ ಅಧಿಕ ಬಡ್ಡಿಯನ್ನು ನೀಡುತ್ತಿರುವುದರಿಂದ ನಾಮಿನಿಯ ಬೇಡಿಕೆಯನ್ನು ಒಪ್ಪಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ:** ಠೇವಣಿ ಮೇಲೆ ನೀಡುವ ಬಡ್ಡಿಯ ವಿಷಯದಲ್ಲಿ ಬ್ಯಾಂಕು ಒಂದು ವಿಸ್ತೃತ ನೀತಿಯನ್ನು ತಯಾರಿಸಬೇಕು. ಮಂಡಳಿಯ ಒಪ್ಪಿಗೆ ಪಡೆದ ನೀತಿಯಲ್ಲಿ ಠೇವಣಿ ಮೇಲೆ ನೀಡುವ ಬಡ್ಡಿ ಬಗ್ಗೆ ಪೂರ್ಣ ವಿವರ ಇರಬೇಕು. ಠೇವಣಿ ಮೇಲೆ ನೀಡುವ ಬಡ್ಡಿಯನ್ನು ನಿರ್ಧರಿಸಲು ಮಂಡಳಿಗೆ ಪೂರ್ಣ ಸ್ವಾತಂತ್ರ್ಯವಿದೆ. ಮಹಾಮಂಡಳ ತಯಾರಿಸಿದ ಮಾದರಿ ಠೇವಣಿ ನೀತಿಯಲ್ಲಿ "ಠೇವಣಿದಾರರ ಮರಣದ ಸಂದರ್ಭದಲ್ಲಿ ಮತ್ತು ಮುಕ್ತಾಯದ ದಿನಾಂಕದ ನಂತರ ಠೇವಣಿ ಮೊತ್ತವನ್ನು ಕ್ಲೈಮ್ ಮಾಡಿದರೆ ಬ್ಯಾಂಕು ಮುಕ್ತಾಯ ದಿನಾಂಕದವರೆಗೆ ಒಪ್ಪಂದದ ದರದಲ್ಲಿ ಬಡ್ಡಿಯನ್ನು ಪಾವತಿಸುತ್ತದೆ. ಮುಕ್ತಾಯ ದಿನಾಂಕದಿಂದ ಪಾವತಿ ದಿನಾಂಕದವರೆಗೆ ಮುಕ್ತಾಯ ದಿನಾಂಕದಂದು ಪಡೆಯುವ ಉಳಿತಾಯ ಠೇವಣಿ ದರದಲ್ಲಿ ಬ್ಯಾಂಕು ಬಡ್ಡಿಯನ್ನು ಪಾವತಿಸುತ್ತದೆ" ಎಂದು ಹೇಳಿದೆ. ಈ ಸಂಬಂಧ ನಿಮ್ಮ ಠೇವಣಿ ನೀತಿಯಲ್ಲಿ ಹೇಳಿರುವ ಪ್ರಕಾರ ಕ್ರಮ ಕೈಗೊಳ್ಳಿ.

## ಮಂಗಳೂರು ಎಂ.ಸಿ.ಸಿ. ಬ್ಯಾಂಕಿನಲ್ಲಿ ಎನ್‌ಆರ್‌ಐ ಸಮಾವೇಶ -2025







**ಮಂಗಳೂರು:** 113 ವರ್ಷಗಳ ಸಮರ್ಪಿತ ಸೇವೆಯ ಪರಂಪರೆಯನ್ನು ಹೊಂದಿರುವ ಪ್ರತಿಷ್ಠಿತ ಎಂಸಿಸಿ ಬ್ಯಾಂಕ್, ಆಗಸ್ಟ್ 17, 2025 ರಂದು ಮಂಗಳೂರು ನಗರದ ಅತ್ತಾವರದಲ್ಲಿರುವ ದಿ ಅವತಾರ್ ಹೋಟೆಲ್‌ನಲ್ಲಿ ತನ್ನ ಎನ್‌ಆರ್‌ಐ ಸಮಾವೇಶ 2025 ಅನ್ನು ಆಯೋಜಿಸಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅನಿಲ್ ಲೋಬೊ ವಹಿಸಿದ್ದರು.

ಕಾರ್ಯಕ್ರಮವನ್ನು ಕಂಕನಾಡಿಯ ಎಫ್‌ಎಂಸಿಐ ನಿರ್ದೇಶಕ ವಂದನೀಯ ಫೌಸ್ಟಿನ್ ಲೋಬೊ ಉದ್ಘಾಟಿಸಿದರು. ರಿಲಯೆಬಲ್ ಫೆಬ್ರಿಕೇಟರ್ಸ್ ಎಲ್‌ಎಲ್‌ಸಿ, ದುಬಾಯಿ ಇದರ ಪ್ರೊಪ್ರೈಟರ್, ಶ್ರೀ ಜೇಮ್ಸ್ ಮೆಂಡೋನ್ಸಾ, ಅಮಿಗೋ ಆಟೋಮೊಬೈಲ್ ಸರ್ವಿಸಸ್ ಎಸ್‌ಪಿ ಎಲ್‌ಎಲ್‌ಸಿ ಅಬುಧಾಬಿ, ಇದರ ಎಮ್‌ಡಿ, ಶ್ರೀ ಲಿಯೊ ರೊಡ್ರಿಗಸ್, ಶ್ರೀ ಲಿಯೊ ರೊಡ್ರಿಗಸ್ ಇವರ ಪತ್ನಿ ಶ್ರೀಮತಿ ಲವೀನಾ ರೋಡ್ರಿಗಸ್ ಮತ್ತು ಡೈಜಿವರ್ಲ್ಡ್ ಮೀಡಿಯಾ ಪ್ರೈವೇಟ್ ಲಿಮಿಟೆಡ್‌ನ ಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವಾಲ್ಟರ್ ನಂದಳಿಕೆ ಅವರು ಗೌರವ ಅತಿಥಿಗಳಾಗಿದ್ದರು.

ಉಪಾಧ್ಯಕ್ಷ ಶ್ರೀ ಜೆರಾಲ್ಡ್ ಡಿ'ಸಿಲ್ವಾ, ಮತ್ತು ನಿರ್ದೇಶಕರ ಮಂಡಳಿಯ ಸದಸ್ಯರಾದ ಶ್ರೀ ಜೋಸೆಫ್ ಎ. ಪತ್ರಾವೊ, ಶ್ರೀ ಆಂಡ್ರ್ಯೂ ಡಿಸೋಜಾ, ಡಾ.ಜೆರಾಲ್ಡ್ ಪಿಂಟೊ, ಶ್ರೀ ಡೇವಿಡ್ ಡಿಸೋಜಾ, ಶ್ರೀ ಎಲ್ರಾಯ್ ಕೆ.ಕ್ರಾಸ್ಟೊ, ಶ್ರೀ ಜೆ.ಪಿ.ರೋಡ್ರಿಗಸ್, ಶ್ರೀ ಹೆರಾಲ್ಡ್ ಮೊಂತೆರೊ, ಶ್ರೀ ರೋಶನ್ ಡಿಸೋಜಾ, ಶ್ರೀಮತಿ ಐರಿನ್ ರೆಬೆಲ್ಲೊ, ಡಾ। ಪ್ರೀಡಾ ಡಿಸೋಜ, ಶ್ರೀ ವಿನ್ಸೆಂಟ್ ಲಸ್ರಾದೊ, ಶ್ರೀ ಸಿ.ಜಿ. ಪಿಂಟೊ, ಶ್ರೀ ಸುಶಾಂತ್ ಸಲ್ಡಾನ್ಹಾ, ಶ್ರೀ ಅಲ್ವಿನ್ ಪಿ.ಮೊಂತೆರೊ ಮತ್ತು ಶ್ರೀಮತಿ ಶರ್ಮಿಳಾ ಮಿನೇಜಸ್ ಹಾಜರಿದ್ದರು.

ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಶ್ರೀ ಡೇವಿಡ್ ಡಿಸೋಜಾ ಸ್ವಾಗತಿಸಿ ಜನರಲ್ ಮ್ಯಾನೇಜರ್ ಶ್ರೀ ಸುನಿಲ್ ಮಿನೇಜಸ್ ವಂದಿಸಿದರು. ಶ್ರೀ ಮನೋಜ್ ಫೆರ್ನಾಂಡಿಸ್ ಕಾರ್ಯಕ್ರಮವನ್ನು ನಿರೂಪಿಸಿದರು.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- 100 ವರ್ಷಗಳ ಹಿಂದೆ ಬ್ರಿಟಿಷರ ಕಾಲದಲ್ಲಿ ಅಂಕೋಲಾದ ತಹಶೀಲ್ದಾರ್ ಕಚೇರಿ ಕಾಮಗಾರಿ ನಿಂತುಹೋಗಿತ್ತು. ಕಟ್ಟಡ ಕಾಮಗಾರಿಯ ಗೋಡೆಯ ಮೇಲೆ ಗಣಪನ ಮೂರ್ತಿ ಪ್ರತಿಷ್ಠಾಪನೆ ಮಾಡಿದಲ್ಲಿ ಕಟ್ಟಡ ಪೂರ್ಣಗೊಳ್ಳಬಹುದೆಂದು ಕಾರ್ಮಿಕರು ಬ್ರಿಟಿಷ್ ಅಧಿಕಾರಿಗಳಿಗೆ ಸಲಹೆ ನೀಡಿದ್ದರು. ಅದರಂತೆಯೇ ಬ್ರಿಟಿಷ್ ಅಧಿಕಾರಿಗಳು ಗೋಡೆಯಲ್ಲಿ ಗಣಪನನ್ನು ನಿರ್ಮಿಸುವಂತೆ ಆದೇಶಿಸಿದರು. ಕಾರ್ಮಿಕರ ಕೈಚಳಕದಿಂದ ಮೂಡಿಬಂದ ಗಣಪ ಗೋಡೆ ಗಣಪತಿ ಎಂದೇ ಪ್ರಸಿದ್ಧಿ ಹೊಂದಿದೆ.
- ಶಿವಣಗಿ ಗ್ರಾಮದಲ್ಲಿ ರೈತ ನವೀನ್ ಮಂಗನವರ್ ಅವರ ತಮ್ಮ ಮಾವಿನತೋಟದಲ್ಲಿ ಥೈಲ್ಯಾಂಡ್ ಮಾವಿನ ತಳಿಯನ್ನು ಬೆಳೆದು ವರ್ಷವಿಡೀ ಆದಾಯ ಗಳಿಸುತ್ತಾರೆ. ಸಂಪೂರ್ಣವಾಗಿ ಮಾಗಿದ, ನೈಸರ್ಗಿಕವಾಗಿ ಸಿಹಿಯಾದ ಮತ್ತು ಸುಗಂಧ ಭರಿತ ಹಣ್ಣು ಮರದ ಮೇಲೆಯೇ ಹಣ್ಣಾಗುತ್ತದೆ.
- ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಸಂದಿಗವಾಡ ಗ್ರಾಮದ ಮುಸ್ಲಿಂ ಯುವಕರು ಹಿಂದೂ ಯುವಕರ ಜತೆ ಸೇರಿ ಗ್ರಾಮದ ಮಸೀದಿಯೊಳಗೆ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿ ಗಣೇಶ ಹಬ್ಬವನ್ನು ಭಾವೈಕ್ಯತೆ ಸಂದೇಶ ಸಾರಿದ್ದಾರೆ. ಈ ಗ್ರಾಮದಲ್ಲಿ, ಹಿಂದೂಗಳು, ಮುಸ್ಲಿಮರು ಮತ್ತು ಇತರರು ರಂಜಾನ್, ದೀಪಾವಳಿ, ಕ್ರಿಸ್ಮಸ್, ಮೊಹರಂ, ಗಣೇಶ ಚತುರ್ಥಿ, ದಸರಾ, ಈದ್ ಮಿಲಾದ್ ಮತ್ತು ಯುಗಾದಿಯಂತಹ ಎಲ್ಲಾ ಹಬ್ಬಗಳನ್ನು ಒಟ್ಟಿಗೆ ಆಚರಿಸುತ್ತಾರೆ.
- ಮಧುಮೇಹಿಗಳಿಗೆ ಚುಚ್ಚುಮದ್ದಿನ ಅಗತ್ಯವಿಲ್ಲದೇ ಇನ್ಸುಲಿನ್ ಪಡೆಯುವ ಹೊಸ ವಿಧಾನ ಬಂದಿದೆ. 'ಅಫ್ರೆಝಾ' ಎಂಬ ಇನ್ಹೇಲ್ ಮಾದರಿಯ ಇನ್ಸುಲಿನ್ ರಕ್ತದಲ್ಲಿನ ಗ್ಲುಕೋಸ್ ಅಂಶವನ್ನು 15–20 ನಿಮಿಷಗಳಲ್ಲಿ ನಿಯಂತ್ರಿಸುತ್ತದೆ. ಇದು ಟೈಪ್ 1 ಮತ್ತು ಟೈಪ್ 2 ಮಧುಮೇಹಿಗಳಿಗೆ ಒಂದು ವರದಾನವಾಗಿದ್ದು, ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಭರವಸೆ ಮೂಡಿಸಿದೆ.
- ಜಮ್ಮು ಮತ್ತು ಕಾಶ್ಮೀರದ ಕಥುವಾದಲ್ಲಿ ಭಾರೀ ಮಳೆಯಿಂದ ಉಂಟಾಗಿರುವ ಪ್ರವಾಹದಲ್ಲಿ ಮುಸ್ಲಿಂ ಸಮುದಾಯದ ಜಾವೇದ್ ಅಹಮ್ಮದ್ ಎಂಬುವರು ಮನೆ ಮಾರು ಕಳೆದುಕೊಂಡಿದ್ದರು. ಈ ವೇಳೆ ಅವರ ಕುಟುಂಬಕ್ಕೆ ಸುಭಾಶ್ ಎಂಬುವವರು ಆಸರೆ ನೀಡಿ ಧಾರ್ಮಿಕ ಸಾಮರಸ್ಯ ಮೆರೆದಿದ್ದಾರೆ.

## ಓದುಗರ ಅನಿಸಿಕೆ...



**ಏನನ್ನು ತೋರಿಸುತ್ತಿದೆ? :** ರೂಪಾಯಿ ಮೌಲ್ಯ ದಾಖಲೆಯ ಕನಿಷ್ಠ ಮಟ್ಟಕ್ಕೆ ಇಳಿದಿದ್ದು, ಪ್ರತಿ ಡಾಲರ್‌ಗೆ ರೂ. 88ಗಳ ಗಡಿಯನ್ನು ದಾಟಿದ್ದು, ಮುಂದಿನ ದಿನಗಳಲ್ಲಿ ರೂಪಾಯಿ ಮೌಲ್ಯ ಇನ್ನಷ್ಟು ಕುಸಿತ ಕಾಣಲಿದೆ ಎಂದು ವಿದೇಶಿ ವಿನಿಮಯ ಸಂಶೋಧನಾ ಮುಖ್ಯಸ್ಥರು ಹೇಳಿದ್ದಾರೆ. 2014ರಲ್ಲಿ ರೂ. 54 ಇದ್ದದ್ದು, ಅಲ್ಲಿಂದ ಕುಸಿಯುತ್ತಾ 88ಗಳ ಗಡಿಯನ್ನು ದಾಟಿ ಇನ್ನೂ ಇಳಿಯುತ್ತಲೇ ಇರುವುದು ಏನನ್ನು ತೋರಿಸುತ್ತಿದೆ?

**ಫಾಲಾಕ್ಷಪ್ಪ ಆರ್., ಕುಕನೂರ**

**ಸಿಬಿಲ್ ಸ್ಕೋರ್ ಅಗತ್ಯವಿಲ್ಲ :** ಸಿಬಿಲ್ ಸ್ಕೋರ್ ಇಲ್ಲ ಎಂಬ ಕಾರಣಕ್ಕೆ ಮೊದಲ ಬಾರಿ ಸಾಲಕ್ಕೆ ಅರ್ಜಿ ಹಾಕಿದವರಿಗೆ ಬ್ಯಾಂಕುಗಳು ಸಾಲ ನಿರಾಕರಿಸುವಂತಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿರುವುದು ಸೂಕ್ತವಾಗಿದೆ. ಇದರಿಂದ ಮೊದಲ ಬಾರಿ ಬ್ಯಾಂಕಿನಿಂದ ಸಾಲ ಪಡೆಯಬಯಸುವವರಿಗೆ ಅನುಕೂಲವಾಗಲಿದೆ. ಅಲ್ಲದೆ ಅಡಮಾನ ಸಾಲದ ಮಿತಿ ರೂ. 2.5 ಲಕ್ಷಕ್ಕಿಂತ ಕಡಿಮೆ ಇದ್ದರೆ, ಸಿಬಿಲ್ ಸ್ಕೋರ್ ಪರಿಶೀಲಿಸುವ ಅಗತ್ಯವಿಲ್ಲ ಎಂದಿರುವುದು ಸ್ವಾಗತಾರ್ಹ.

**ಮುರಳೀಧರ್ ಎಂ., ಬೆಂಗಳೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.